ದಿನಾಂಕಃ **10-07-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಜಿ.ಬಿ.ಎ. ವಕೀಲರಿಂದಃ

ನಾನು 10 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತೇನೆ. 2 ಮತ್ತು 3 ನೇ ವಾದಿಗಳು ನನ್ನ ಅಕ್ಕಂದಿರಾಗಿದ್ದು ಅವರೂ ಸಹ 10 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತಾರೆ. ಸಾಕ್ಷಿಯು ಹಾರೋಘಟ್ಟ ಗ್ರಾಮದ ನಿವಾಸಿ ಎಂದು ಹೇಳುತ್ತಾರೆ. ಸಾಕ್ಷಿಯ ಮುಖ್ಯ ಪ್ರಮಾಣಪತ್ರಿಕೆಯಲ್ಲಿ ಬೋಚಿಹಳ್ಳಿ ಗ್ರಾಮದ ನಿವಾಸಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಈಗ ಅಲ್ಲಿ ವಾಸ ಇರುವುದಾಗಿ ಹೇಳುತ್ತಾರೆ. ಪ್ರತಿವಾದಿ ನಂ.1 ಮತ್ತು 2 ರ ತಂದೆಯಾದ ಚಿಕ್ಕಣ್ಣ ನವರು ತೀರಿಹೋಗಿದ್ದು ಅವರು ಕರಾಡಾಳು ಗಾಮ ಎಂದರೇ ಸರಿ . ಸದರಿಯವರು ಕರಡಾಳು ಗ್ರಾಮದ ನಿವಾಸಿ ಎಂದರೆ ಸರಿ . ಸಾಮಾನ್ಯವಾಗಿ ಮದುವೆ ಎಂದರೆ ಎರಡೂ ಕಡೆಯ ನೆಂಟರಿಷ್ಟರುಗಳು ಬಂದು ಮದುವೆಯಲ್ಲಿ ಹಾಜರಿದ್ದು ಫೋಟೋಗಳನ್ನು ತೆಗೆಸಿಕೊಂಡಿರುತ್ತಾರೆ ಎಂದರೆ ಸರಿ .

ಪ್ರತಿವಾದಿಯ ತಂದೆಯವರಾದ ಚಿಕ್ಕಣ್ಣನವರು ವಾದಿಯವರಿಗೂ ತಂದೆ ಎಂದರೆ ಸರಿ . ಅದಕೆಕ ಸಂಬಂದಪಟ್ಟ ಹಾಗೆ ಮದುವೆ ಪತ್ರಿಕೆ ಅಥವಾ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಚಿಕ್ಕಣ್ಣನವರು ವಾದಿಯವರ ತಂದೆಯಲ್ಲ ಹಾಗೂ ಗಂಗಮ್ಮರವರು ವಾದಿಯವರ ತಾಯಿಯಲ್ಲ ಎಂದರೆ ಸರಿಯಲ್ಲ. ಸಾಕ್ಷಿಯವರು ನ್ಯಾಯಾಲಯಕ್ಕೂ ಹಾಜರುಪಡಿಸಿರುವ ನಿಪಿ.7 ರ ಪ್ರಕಾರ ಗ್ರಾಮ ಲೆಕ್ಕಾಧಿಕಾರಿಗಳು ಬರೆದಂತ ವಂಶವೃಕ್ಷ ಆಗಿರುತ್ತದೆ ಎಂದರೆ ಸರಿ. ಹಾಗೂ ನಿಪಿ.12 ರಪ್ರಕಾರ ಧೃಡೀಕೃತ ವಂಶವೃಕ್ಷ ಪ್ರತಿಯನ್ನು ತಹಸೀಲ್ದಾರ್ ರವರಿಂದ ಪಡೆಯ ಬೇಕಾದರೆ 20 ರೂ. ಸ್ಟಾಂಪ್ ಪೇಪರ್ ಗೆ ನೋಟರಿ ಮಾಡಿಸಿ ಪಡೆದುಕೊಳ್ಳಬೇಕು ಎಂದರೆ ಸರಿ . ಸದರಿ ರೂ.20/- ಗಳ ಸ್ಟಾಂಪ್ ಪೇಪರ್ ನ್ನು ಕೊಟ್ಟ ನಂತರ ತಹಸೀಲ್ದಾರವರು ಪಡೆದುಕೊಂಡು ಜೆರಾಕ್ಸ್ ಪ್ರತಿಯನ್ನು ಇಟ್ಟುಕೂಂಡು ಅದರ ಮೂಲ ಪ್ರತಿಯನ್ನು ಕೊಡುತ್ತಾರೆ ಎಂದರೆ ಸರಿ . ಸದರಿ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೂಂದರೆ ಇಲ್ಲ ಎನ್ನುತ್ತಾರೆ. ಸದರಿ ದಾಖಲಾತಿಯನ್ನು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ಹೇಳುತ್ತಾರೆ .

ಸಾಕ್ಷಿಯು ನೋಟರೈಸಡ್ ವಂಶವೃಕದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ತಾನು ತಮ್ಮ ವಕೀಲರ ಕಡೆ ನೀಡಿರುವುದಾಗಿ ಹೇಳುತ್ತಾರೆ. ನಿಪಿ.12 ನ್ನು ಸಾಕ್ಷಿಯವರು ಸೃಷ್ಟಿಸಿದ ದಾಖಲಾತಿ ಹಾಗೂ ಅವರ ಬಳಿ ಯಾವುದೇ ವಂಶವೃಕ್ಷದ ಪ್ರತಿ ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಭಾಗಾಂಶದ ಹಕ್ಕಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಚಿಕ್ಕಣ್ಣನವರಿಗೆ 1 ಮತ್ತು 2 ನೇ ಪ್ರತಿವಾದಿ ಹೊರತು ಪಡಿಸಿ ಬೇರೆ ಯಾವ ಮಕ್ಕಳು ಇರುವುಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ನನ್ನ ತಾಯಿಯಾದ ಗಂಗಮ್ಮನವರಿಗೆ ಮತ್ತು 3 ನೇ ವಾದಿಯವರಿಗೂ ಮಾತು ಬರುತ್ತಿರಲಿಲ್ಲ ಹಾಗೂ ಕಿವಿಯೂ ಸಹ

ಕೇಳಿಸುತ್ತಿರಲಿಲ್ಲ . ನನ್ನ ತಾಯಿಯೇ ಚಿಕ್ಕಣ್ಣವರಿಗೆ ಮೊದಲನೇ ಹೆಂಡತಿಯಾಗಬೇಕು ಹಾಗೂ ಪ್ರತಿವಾದಿ 2 ನೇ ಹೆಂಡತಿಯಾಗಬೇಕು ಎಂದು ಹೇಳುತ್ತಾರೆ. ವಾದಿಯವರು ಸಲ್ಲಿಸಿರುವಂತಹ ವಾದ ಪತ್ರಿಕೆಯಲ್ಲಿ ಸದರಿ ವಿಷಯಗಳನ್ನು ನಮೂದಿಸಿ ಅದಕ್ಕೆ ಸಂಬಂದಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸರಿ. ಅದೇ ರೀತಿ ವಾದಿಯವರು ಸದರಿ ವಿಷಯವನ್ನು ವಾದ ಪತ್ರಿಕೆಯಲ್ಲಿ ನಮೂದಿಸಿಲ್ಲ ಹಾಗೂ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಾದಿಯವರು ಮುಂಚೆ ಇದ್ದಂತಹ ಹಾರೋಘಟ್ಟ ಗ್ರಾಮದ ನಿವಾಸಿ ಎಂದು ತೋರಿಸಲು ಅಧಾರ್ ಕಾರ್ಡ್ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಪ್ರತಿವಾದಿಯವರ ತಂದೆಯವರಾದ ಚಿಕ್ಕಣ್ಣನವರು ಬೋಚಿಹಳ್ಳಿ ಗ್ರಾಮಕ್ಕೆ ಭೇಟಿ ನೀಡಿಲ್ಲ ಹಾಗೂ ಅವರು ಅಲ್ಲಿಯ ವಾಸಿಯಲ್ಲ ಎಂದರೆ ಸರಿಯಲ್ಲ. ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ಅವರ ತಂದೆಯಾದ ಚಿಕ್ಕಣ್ಣನವರನ್ನು ನೋಡಿಕೊಂಡಿದ್ದು ಹಾಗೂ ಅವರ ಅಂತ್ಯಕ್ರಿಯೆಯನ್ನು ಮಾಡಿದ್ದರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಹಾಗೂ ಮುಂದುವರೆದು ಚಿಕ್ಕಣ್ಣನವರ ಅಂತ್ಯಕ್ರಿಯೆನ್ನು ತಾವೇ ಸ್ವತಃ ಮಾಡಿರುವುದಾಗಿ ಹೇಳುತ್ತಾರೆ. ಸಾಕ್ಷಿ ಹೇಳಲು ಬಂದಂತಹ PW-2 ರವರು ಅವರ ಮುಖ್ಯ ಪಮಾಣಪತ್ರಿಕೆಯನ್ನು ಸಲ್ಲಿಸಿದ ನಂತರ ನೀತಿ ಹೋಗಿರುತ್ತಾರೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.